ಸದರೀ ದರಖಾಸ್ತುದಾರನಾದ ವೀರತ್ತಪ್ಪನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಭದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮುದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಜೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನ ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 / 1882—83	7—4—82.	7—4—82	ಯೆಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇವಪ್ಪ ಗೌಡನ ದ್ಯಾವೇಗೌಡನ ಹೆಂಡತಿ ಜರ್ಮಿನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಪೆರಾಯಿತು ಈಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 3ನೇ ಅಕ್ಟೋಬರ್ 1884.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಸರ್ಕಾರೀ ಬಂಜರ್ ಜಂಗಲ್ ತಾಕು, ಕಾಫೀ ಸಾಗುವಳಿಗಾಗಿ ಕಾಯಂ ದರಕ್ಕೆ ಕೊಟ್ಟೊಡ್ಡಿ ಯಸ್ಟೇಟಿನ ಮೆ॥ ಯಫ್. ಎಸ್. ಹೇಯವರಿಂದ ದರಖಾಸ್ತು ಮಾಡಲ್ಪಟ್ಟಿರುವದರಿಂದ, 1884ನೇ ಇಸವಿ ಡಿಸಂಬರ್ 1ನೇ ಮರ್ಕುಮಿನಲ್ಲಿ ಕೊಪ್ಪ ತಾಲ್ಲೂಕು ಅಮಲ್ ದಾರ್ರ ರೂಬರೂ ಹರಿಹರಪುರದ ಮೊಕ್ಕಾಮಿನಲ್ಲಿ, ಸದರೀ ತಾಕಿಗೆ ಐಯಿಂದ ಗೊತ್ತು ಮಾಡಲ್ಪಡಬಹುದಾದ ಕಂದಾಯ ತೆರುವ ಬಗ್ಯೂ ಮತ್ತು ಆವಶ್ಯಕವಾಗಿರಬಹುದಾದ ಯಾವದಾದರೂ ಮೊಗ್ಗ ಮತ್ತು ಜಲಾಧಾರ ವಗೈರೇ ಹಕ್ಕುಗಳಿಗೆ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪಡೆಯುವ ಚಡ ದರಖಾಸ್ತುದಾರನು ಕ್ರಯದ ಮೊಬಲಗ್ ಫೈಕೀ ಶೇಕಡಾ 25ರ ಪ್ರಕಾರ ಆಗುವ ಮೊಬಲಗನ್ನು ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ ಯಿಡಲ್ಪಟ್ಟು ಬಾಕೀ ಮೊಬಲಗು ಆ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು; ಹಾಗೆ ಪಾವತೀ ಮಾಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಚಡ ದರಖಾಸ್ತುದಾರನು ಕೂಡ್ಲಿ ಶೇಕಡಾ 25ರ ಪ್ರಕಾರ ಡಿಪಾಜಿಟ್ ಮೊಬಲಗನ್ನು ಯಿಡುವದಕ್ಕಾಗಲೀ ಬಾಕೀ ಮೊಬಲಗನ್ನು 15 ದಿನಗಳೊಳಗಾಗಿ ಕೊಡಲಿಕ್ಕಾಗಲೀ ತಪ್ಪಿದರೆ ಸದರೀ ಜಮೀನು ಚಡ ದರಖಾಸ್ತುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಶ್ಚ ಹರಾಜು ಹಾಕಲ್ಪಡುವದು.

4. ಜಮೀನ್ ಕ್ರಯವನ್ನು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ತನಕ ಆಖೈರಾದ್ದಾಗಿರತಕ್ಕದ್ದಲ್ಲ.

5. ಜಮೀನಿನ ತಪಸೀಲಿನಲ್ಲಾಗಲೀ ಅಥವಾ ಅಂದಾಜಾ ಬೀಜವರೀಯಲ್ಲಾಗಲೀ ಯಿರುವ ಗಲ್ಲತಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು. ಇತರ ಹೆಚ್ಚಿಗೆ ತಪಸೀಲುಗಳು ಹರಾಜು ಕಾಲದಲ್ಲಿ ಕೇಳಿ ತಿಳದುಕೊಳ್ಳಬಹುದು.

6. ದರಖಾಸ್ತು ಮಾಡಲ್ಪಟ್ಟ ಜಂಗಲ್ ತಾಕು ಈ ಕೆಳಗೆ ಕಂಡ ಚಕ್ಕು ಬಂದಿಯಲ್ಲಿ ಅಡಗಿರುತ್ತೆ. ದರಖಾಸ್ತುದಾರನ ಖಾಯಿಷ್ ನಂತೆ ಸರ್ವೇ ಇಲಾಖೆಯವರಿಂದ ಸದರೀ ಜಮೀನ್ ಸರ್ವೇ ಮಾಡಲ್ಪಟ್ಟು ಬಾಂದು ಗುರ್ತುಗಳು ಹಾಕಲ್ಪಟ್ಟಿರುತವೆ, ಆದರೆ ಸರ್ವೆ ವ್ಯಾಪ್ತಿ ತಲ್ಪಿರುವದಿಲ್ಲವಾಗಿ ಕೊಡಲ್ಪಟ್ಟ ಚಕ್ಕು ಬಂದಿ ವ ಬೀಜವರೀ ಅಂದಾಜಾ ಆಗಿರುತ್ತೆ.

ದರಖಾಸ್ತು ಮಾಡಿರುವ ಜಂಗಲ್ ತಪಸೀಲ್‌ಗಳು—

ಡಿಸ್ಟ್ರಿಕ್ಟು	..	ಕಡೂರು.	ಗ್ರಾಮ	..	ಜೈರೆದೇವರು.
ತಾಲ್ಲೂಕು	..	ಕೊಪ್ಪ.	ಸರ್ವೆ ನಂಬರ್		159 ವ 194ರ ಭಾಗಗಳು.
ಮಾಗಣಿ	..	ಮೇಗುಂದ.	ಬೀಜವರೀ		ಫುಮಾರ್ ಯಂಭತ್ತು ಎಕರೆಗಳು.

ಚಕ್ಕು ಬಂದಿ.

ಪೂರ್ವಕ್ಕೆ—ಬೆಟ್ಟದ ಕೊಳಲು ಗ್ರಾಮದ ಯಲ್ಲೆ.	ಪಶ್ಚಿಮಕ್ಕೆ—ಕಮ್ಮಾರ್‌ಮಂಣು ತರೀ ಜಮೀನ್.
ದಕ್ಷಿಣಕ್ಕೆ—ಕುಡಗೋಲೆಹಿಡಿ ಬಿಳಲು.	ಉತ್ತರಕ್ಕೆ—ಕೊಟ್ಟೋಡಿ ಕಾಫೀ ಯಸ್ಟೇಟ್.

ಮಹಮ್ಮದಲ್ಲೀ, ಕೆ. ಬಿ.,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಸ್ಯ 1884ನೇ ಇಸವಿ ಅಕ್ಟೋಬರ್ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಸದರೀ ಮೂಹೆಯಲ್ಲಿ ಇದರಡೀ ಕಂಡಪ್ರಕಾರ ಮಳೆ ಆಗಿರುತ್ತೆ:—

	ಇಂ.	ಸೆಂ.		ಇಂ.	ಸೆಂ.
ಶಿವಮೊಗ್ಗಾ ..	4	78	ಸಾಗರ ..	1	70
ಚನ್ನಗಿರಿ ..	2	25	ನಗರ ..	5	45
ಹೊನ್ನಾಳಿ ..	4	65	ತೀರ್ಥಹಳ್ಳಿ ..	4	54½
ಶಿಕಾರಿಪುರ ..	4	70	ದಾವಣಗೆರೆ ..	2	95
ಸೊರಬ ..	3	50			

ಪೇರಾವಾದಧಾನ್ಯ.—ಸದರೀ ಮೂಹೆಯಲ್ಲಿ ಕಡ್ಲೆ, ವುದ್ದು, ಹೆಸರು, ಹರಳು, ಹುರಳಿ, ಯಳ್ಳು, ನವಣೆ, ಜೋಳ ಮತ್ತು ಹತ್ತಿ ಇವು ಬಿತ್ತಲ್ಪಟ್ಟವು.

ಫಸಲಿನ ಸ್ಥಿತಿ.—ಮಳೆಯಿಲ್ಲದೆ ಬಾಡುತಲಿದ್ದ ಫಸಲುಗಳು ಸದರೀ ಮೂಹೆ ಆಖೈರ್ ಭಾಗದಲ್ಲಿ ಬಿದ್ದ ಮಳೆಯಿಂದ ಅಭಿವೃದ್ಧಿಯಾಗುತಲಿದೆ.

ಕಟಾವಾದ ಫಸಲು.—ಸದರೀ ಮೂಹೆಯಲ್ಲಿ ರಾಗಿ, ಜೋಳ, ವುದ್ದು, ಹೆಸರು, ಕುರಾಸಾನಿ, ಅಡಿಕೆ, ಇಲಾಚಿ ಮತ್ತು ಯಳ್ಳು ಇವು ಕಟಾವಾದವು.

ಜನಾರೋಗ್ಯ.—ಸಾಧಾರಣವಾಗಿ ಛಂದಾಗಿದೆ. ದಾವಣಗೆರೆ ತಾಲ್ಲೂಕು ಹರಿಹರದಲ್ಲಿ ಸದರೀ ಮೂಹೆ ಆಖೈರ್‌ಭಾ ದಲ್ಲಿ ಮುವ್ವರು ಉಖಾಲ್‌ಜ್ವರಾಬ್ ಉಪದ್ರವದಿಂದ ವ್ಯಕ್ತಪಟ್ಟಂತೆ ರಿಪೋರ್ಟಾಗಿರುತ್ತೆ.

ಕಾಲ್ನಡೆ.—ದಾವಣಗೆರೆ ತಾಲ್ಲೂಕಿನಲ್ಲಿ ನೀರು, ಮೇವು ಇಲ್ಲದೆ ನಾದಾತಾಗಿದ್ದ ದನಗಳು ಈಚಿಗೆ ಬಳ್ಳೇಯಸ್ಥಿತಿಯಲ್ಲಿರುವದಾಗಿ ರಿಪೋರ್ಟಾಗಿರುತ್ತೆ.

ದಾರಣೆ.—ಒಂದೇ ರೀತಿಯಾಗಿದೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.